ಶರಣ ಚಳವಳಿಯ ಸನಿಹದಲ್ಲೇ ಬಂದ ಹರಿಹರ ತನ್ನ ವ್ಯಾಪಕ ತಿರುಗಾಟದ ಮೂಲಕ ಜನಸಮೂಹದ ಸಂಕಷ್ಟಗಳನ್ನು ಬಲ್ಲವನಾಗಿದ್ದು, ಅತ್ತ ಪಂಡಿತರೆನಿಸಿಕೊಂಡವರನ್ನು ತಳ್ಳಿಹಾಕಿ, ಇತ್ತ ಅರಸರೆಂಬವರನ್ನು ಒರೆಸಿ ಆನೆ ನಡೆದುದೇ ಹಾದಿ ಎಂಬಂತೆ, ತಾನೇ ನಿರ್ಮಿಸಿಕೊಂಡ ಕಾಲುದಾರಿಯಲ್ಲಿ ಪ್ರಯಾಣಗೈದ ಸರ್ವತಂತ್ರ ಸ್ವತಂತ್ರ ಕವಿ. ಕಾಳಿದಾಸನು ತನ್ನ ವ್ಯಕ್ತಿತ್ವಕ್ಕಿದ್ದ ಸಹಜ ವಿನಯದಲ್ಲಿ 'ಪರಿತೋಷಾದ್ವಿದುಷಾಂ ನ ಸಾಧುಮನ್ಯೆ ಪ್ರಯೋಗ ವಿಜ್ಞಾನಂ' ಅಂದರೆ ವಿದ್ವಾಂಸರು ಮೆಚ್ಚುವ ರೀತಿಯಲ್ಲಿ ಕೃತಿ ರಚಿಸಲು ತಾನು ಸಮರ್ಥನಲ್ಲ ಎಂದರೆ, ಹರಿಹರ ತಾನು ಯಾವ ಅರಸನ ಹಂಗಿನ ಪಂಡಿತ ಮಂಡಳಿಯನ್ನು ಮೆಚ್ಚಿಸಬೇಕಾದ ಅಗತ್ಯವೇ ಇಲ್ಲದವನು ಎಂಬ ಆತ್ಮ ಪ್ರತ್ಯಯದ ಮಾತುಗಳನ್ನಾಡಿದವನು.

ಇಷ್ಟಾಗಿ, ಹರಿಹರನ ಮೆಟ್ಟು ಹೊಲೆಯುವ, ಬಟ್ಟೆ ಒಗೆಯುವ, ಬೇಸಾಯ ಹೊಡೆಯುವ ಪಾತ್ರಗಳು ಭಕ್ತಿಯ ಹಟಕ್ಕೆ ಬಿದ್ದು ಶಿವನನ್ನು ಹುಡುಕಿಕೊಂಡೇನೂ ಹೋಗುವುದಿಲ್ಲ. ಬದಲಾಗಿ ಶಿವನೇ ಇವರತ್ತ ಸುಳಿಯುತ್ತಾನೆ! ಬರಿದೇ ಬರುವುದಿಲ್ಲ. ಪಕ್ಕದಲ್ಲೇ ಇರುವ ಪಾರ್ವತಿಗೆ 'ಕಂಡಿರೇ ದೇವಿಯರು ತನ್ನ ಭಕ್ತರ ಘನತೆಯನು' ಅಂದು ಪರಿಚಯಿಸುವುದಲ್ಲದೆ ಆ ಸಾಮಾನ್ಯ, ಅಸಮಾನ್ಯ ಭಕ್ತರ ಕಾಯಕದ ಪರಿಯನ್ನು ಲೋಕಕ್ಕೂ ಸಾರುತ್ತಾನೆ. ಇದರೊಂದಿಗೆ ಅರಸರ ಆಶ್ರಯದಲ್ಲಿ ಕವಿಗಳು ಬದುಕಬೇಕಿಲ್ಲ ಎಂದವನು 'ಶ್ರೀ ಸಾಮಾನ್ಯ'ನನ್ನು 'ನೀನಹರ್ನಿಶಂ' ಎಂದು ಎಚ್ಚರಿಸುತ್ತಾನೆ. ಕುವೆಂಪು ಅವರ 'ಶ್ರೀ ಸಾಮಾನ್ಯನೆ ಭಗವನ್ ಮಾನ್ಯಂ' ಎಂಬ ಮಾತಿಗೆ ಹರಿಹರನೇ ಮೂಲ!

★★★

1968ರಲ್ಲಿ ಎಚ್. ದೇವೀರಪ್ಪನವರು ಸಂಪಾದಿಸಿದ ಹಂಪೆಯ ಹರಿಹರ ದೇವರ ರಗಳೆಗಳ ಕೃತಿ 'ಶರಣ ಚರಿತ ಮಾನಸಂ' ಎಂಬ ಗ್ರಂಥಕ್ಕೆ ಡಿ.ಎಲ್. ನರಸಿಂಹಾಚಾರ್ ಅವರು ಮುನ್ನುಡಿ ಬರೆಯುತ್ತ, 'ಇಂಥ ಮಹಾಕವಿಯ ಕೃತಿಗಳನ್ನು ಎಷ್ಟು ಅಭ್ಯಾಸ ಮಾಡಿದರೂ ಸಾಲದು. ಇದಕ್ಕಾಗಿ ಸಂಪಾದಕರು ಪಟ್ಟಿರುವ ಶ್ರಮವನ್ನು ಅಂಥ ಕಾರ್ಯ ಮಾಡಿದವರೇ ಚೆನ್ನಾಗಿ ತಿಳಿಯಬಲ್ಲರು. ದೇವೀರಪ್ಪನವರು ತಮ್ಮ ಸಂಪಾದನಾ ಕಾರ್ಯವನ್ನು ಪ್ರಾಮಾಣಿಕತೆಯಿಂದಲೂ, ದಕ್ಷತೆಯಿಂದಲೂ ನೆರವೇರಿಸಿ ಪುಣ್ಯಭಾಗಿಗಳಾಗಿದ್ದಾರೆ' ಎಂದಿದ್ದಾರೆ.

ಹಳಗನ್ನಡ ಕೃತಿ ಶೋಧನೆ, ಸಂಪಾದನೆ ಮತ್ತು ಅಧ್ಯಯನಕ್ಕೆ ಸಂಬಂಧಪಟ್ಟಂತೆ ಕಳೆದ ಶತಮಾನದ ಬಿ.ಎಲ್. ರೈಸ್, ಕಿಟೆಲ್, ಹರ್ಮನ್ ಮೊಗ್ಲಿಂಗ್, ಫ್ಲೀಟ್ ಇವರಿಂದ ಮೊದಲಾಗಿ, ಸ್ಥಳೀಯ ಕನ್ನಡ ವಿದ್ವಾಂಸರು ಮಾಡಿರುವ ಕೆಲಸವೆಲ್ಲವೂ ಅವರು ಕನ್ನಡದ ಮೇಲಿನ ಪ್ರೀತಿಯಿಂದಲೇ, ಯಾವುದರ ಅಪೇಕ್ಷೆಯೂ ಇಲ್ಲದೆ ಮಾಡಿರುವ ಕಾರಣಕ್ಕಾಗಿಯೇ ಡಿ.ಎಲ್.ಎನ್. ಆ ಬಗೆಯ ಕೈಂಕರ್ಯವನ್ನು ಪುಣ್ಯದ ಕೆಲಸ ಎಂದಿರುವುದು. ಹಾಗೆಯೇ ಡಿ.ಎಲ್.ಎನ್. ಹರಿಹರನನ್ನು ಕುರಿತು, 'ಈ ಕವಿಯ ಕಾವ್ಯಗಳು ಸನತ್ಕುಮಾರನ ಶಾಶ್ವತ ಯೌವನದಿಂದ ಕೂಡಿವೆ' ಎನ್ನುತ್ತಾರೆ. ಇದೇ ಸಂದರ್ಭದಲ್ಲಿ ಹರಿಹರನ ಕಾಲವನ್ನು ಕುರಿತಂತೆ ಶಿ.ಚೆ. ನಂದೀಮಠ, ಆರ್.ಸಿ. ಹಿರೇಮಠ, ಚಿದಾನಂದಮೂರ್ತಿ, ಸ.ಸ. ಮಾಳವಾಡ, ಆರ್. ನರಸಿಂಹಾಚಾರ್ಯ, ಕೆ.ಜಿ. ಕುಂದಣಗಾರ, ಗೋವಿಂದ ಪೈ ಇವರೆಲ್ಲ ಯಥಾವಿಧಿಯಾಗಿ ಮಿಕ್ಕೆಲ್ಲ ಕವಿಗಳ ಕಾಲವನ್ನು ಚರ್ಚಿಸಿದಂತೆಯೇ ವಾದ ಹೂಡಿರುತ್ತಾರೆ. ಆ ನಿಟ್ಟಿನಲ್ಲಿ ಈತನ ಕಾಲ 1150ರಿಂದ 1250ರ ನಡುವೆ ಎಂದು ತೀರ್ಮಾನಿಸಲಾಗಿದೆ. ಅರಸರ ಆಸ್ಥಾನದಲ್ಲಿದ್ದು ಕಾವ್ಯ ರಚಿಸಿದವರಿಗೆ ತಕ್ಕಮಟ್ಟಿಗೆ ಕಾಲ ನಿರ್ಣಯ ಸುಲಭ; ಆದರೆ ಹರಿಹರ, ಅಲ್ಲಮ, ಕುಮಾರವ್ಯಾಸರಂಥ ಸಂಚಾರಿ, ಸಂತಕವಿಗಳ ಜನ್ಮ ಕಾಲ ನಿಗದಿಗೆ ಪಂಚಾಂಗ ಅಷ್ಟಾಗಿ ಸಹಾಯಕ್ಕೆ ಬರುವುದಿಲ್ಲ! ಇವರ ಕಾವ್ಯೋದ್ದೇಶದ ಆಶಯಗಳು ಹೇಗೆ ಎಲ್ಲ ಶತಮಾನಕ್ಕೂ ಸಲ್ಲುತ್ತವೋ ಹಾಗೆಯೇ ಅವರ ಕಾಲವೂ ಕೂಡ.